ದಿನಾಂಕಃ 10-04-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ- ವಾದಿ ಪರವಾಗಿಃ ಶ್ರೀ. ವಿ.ಆರ್.ಆರ್. ವಕೀಲರಿಂದಃ-**

ನನ್ನ ಮುಖ್ಯ ವಿಚಾರಣೆಯ ಸಲುವಾಗಿ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳೆಲ್ಲಾ ಸರಿಯಾಗಿವೆ ಮತ್ತು ಸತ್ಯವಾಗಿವೆ ಎಂದು ಪ್ರಮಾಣೀಕರಿಸಿ ನನ್ನ ಸಹಿ ಮಾಡಿರುತ್ತೇನೆ.

ದಾವಾ ಆಸ್ತಿಗೆ ಸಂಬಂಧಪಟ್ಟ ನೊಂದಾಯಿತ ಕ್ರಯದ ಕರಾರು ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ.1 ಎಂದು, ಆ ಕ್ರಯದ ಕರಾರು ಪತ್ರಕ್ಕೆ ಪ್ರತಿವಾದಿಯರು ಸಹಿ ಮಾಡಿರುತ್ತಾರೆ. ಪ್ರತಿವಾದಿಯರ ಸಹಿಗಳನ್ನು ಈಗ ನೋಡುತ್ತಿದ್ದು ಅವುಗಳನ್ನು ನಿಪಿ.10(ಎ) ರಿಂದ 1(ಸಿ) ಎಂದು ಗುರುತಿಸಲಾಯಿತು. ನನ್ನ ತಂದೆ ಕೆಂಪಣ್ಣರವರು ಸಹ ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದು, ಅದನ್ನು ನೋಡಿ ಗುರುತಿಸುತ್ತೇನೆ. ಆ ಕ್ರಯದ ಕರಾರು ಪತ್ರಕ್ಕೆ ಸಾಕ್ಷಿದಾರರಾಗಿ ಪಾಂಡುರಂಗರೆಡ್ಡಿ, ಮೂಡಲಗಿರೀಶ್ ಮತ್ತು ನಾಗರೆಡ್ಡಿರವರು ಸಹಿ ಮಾಡಿರುತ್ತಾರೆ. ದಾವಾ ಆಸ್ತಿಗೆ ಸಂಬಂಧಪಟ್ಟಂತೆ ಗಣಕೀಕೃತ ಪಹಣಿ ಪತ್ರಿಕೆಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.2 ಎಂದು, ನಾನು ನಮ್ಮ ವಕೀಲರ ಮೂಲಕ ಪ್ರತಿವಾದಿಯರಿಗೆ ನೀಡಲಾದ ಕಾನೂನುಬದ್ಧ ನೋಟೀಸಿನ ಕಚೇರಿ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.3 ಎಂದು, ಆ ನೋಟೀಸಿಗೆ ಪ್ರತಿವಾದಿಯರು

ನೀಡಿದ ಮರು ಉತ್ತರದ ಪ್ರತಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ.4 ಎಂದು, ಆ ನೋಟೀಸ್ ಕಳುಹಿಸಿದ ಬಗ್ಗೆ 3 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.5 ರಿಂದ 7 ಮತ್ತು ಆ ನೋಟೀಸ್ ಜಾರಿಯಾದ ಬಗ್ಗೆ 3 ಅಂಚೆ ಸ್ವೀಕೃತಿಗಳನ್ನು ಹಾಜರುಪಡಿಸಿದ್ದು ಅವುಗಳನ್ನು ನಿಪಿ.8 ರಿಂದ 10 ಎಂದು ಗುರುತಿಸಲಾಯಿತು.

ಆದ್ದರಿಂದ, ದಾವೆಯನ್ನು ಡಿಕ್ರಿ ಮಾಡಬೇಕಾಗಿ ಕೇಳಿಕೊಳ್ಳುತ್ತೇನೆ.

**ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ-**

ಈ ಹಂತದಲ್ಲಿ ವಕೀಲರ ವಿನಂತಿ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನುಡಿದಂತೆ ಗಣಕೀಕೃತಗೊಳಿಸಲಾಯಿತು)

ಓ.ಹೇ.ಸಾ.ಸ.ಇ.ಒ.

ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆಎಂಎಫ್‌ಸಿ, ಮಧುಗಿರಿ